MYSORE LEGISLATIVE ASSEMBLY

TWENTY-FIFTH DAY.

Tuesday, the 22nd March 1955.

The House met in the Legislative Assembly Hall, Old Public Offices, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Mr. SPEAKER.— Question No. 15, 220 and 230 may be taken up together.

National Extension Service Blocks.

Q.— 15. **Sri S. KARIAPPA** (Virupakshapura).—

Will the Government be pleased to state :—

(*a*) whether advisory committees for each of the National Extension Service Blocks have been constituted ;

(*b*) if the answer is in the affirmative, the names of persons who are on each of the committees ?

A.—**Dr. R. NAGAN GOWDA** (Minister for Agriculture).—

(*a*) Yes.

(*b*) Copy of the Government Order No. L. S. 9467-9537—Plng. 131-54-2, dated 25th February 1955 is placed on the Table.

Q.—220. **Sri T. G. THIMMEGOWDA** (Tiptur).—

Will the Government be pleased to state :—

(*a*) the requirements of a taluk or other area for being eligible to be recommended to start a N.E.S. centre ;

(*b*) whether any preliminary survey was made or statistics collected before recommending the present areas as desirable to establish N. E. S. centres ;

(*c*) the nature of the survey made or statistics collected ;

(*d*) whether they would be pleased to consider the desirability of starting a N.E.S. centre in Tiptur Taluk ?

A.—**Dr. R. NAGAN GOWDA** (Minister for Agriculture).—

(*a*) The guiding principle in selecting the areas for locating the allotted National Extension Service Blocks is to make available the benefits of the Scheme to rural population all over the State by stages, covering the entire State by the end of the Second Five-Year Plan period.

(*b*) No.

(*c*) Does not arise in view of reply to (*b*) above.

(*d*) Will be considered.

Q.—230. **Sri M. CHIKKALINGIAH** (Malavalli— Scheduled Castes).—

Will the Government be pleased to state :—

(*a*) the number of N.E.S. Blocks that are working in the State (National Extension Scheme) ; and when they are started (each centre) for functioning ;

(*b*) the budget allotment to each block and items of work to be taken up ;

(*c*) the expenditure on each item of development work (blockwar information may kindly be furnished) ;

(*d*) the agency that manages these Blocks ; is there any Board or Committee ?

A.—**Dr. R. NAGAN GOWDA** (Minister for Agriculture).—

(*a*) 14 National Extension Service Blocks as follows are working in the State at present.

(DR. R. NAGAN GOWDA.)

1953-54 *Series—Started from 2nd October* 1953.

(1) Ramanagaram *cum* Kanakapura Block
(2) Gundlupet Block
(3) Hole-Narsipur Block
(4) Turuvekere Block
(5) Harihar *cum* Davangere Block
(6) Sidlaghatta Block
(7) Koppa *cum* Narasimharajapura Block

1954-55 *Series—Started from 2nd October* 1954.

(8) Malavalli Block (Working as a National Extension Service Block from 1st April 1954.)
(9) Arkalgud Block
(10) Mudigere ,,
(11) Siraguppa ,,
(12) Holalkere ,,
(13) Tumkur—Gubbi Block
(14) Srinivasapur ,,

(*b*) Schematic Budget of each Block is Rs. 7·5 lakhs spread over a period of three years. In addition, the Seven Blocks of 1953-54 Series have been allotted by the Government of India, Community Projects Administration, a sum of Rupees one lakh for each, by way of loan, for the purpose of providing Housing accommodation to the Project Staff.

Each Block will have a small 'Works' programme forming a nucleus around which the Staff would be engaged in productive activities in respect of basic amenities, such as Agriculture, Animal Husbandry, Co-operation, Social Education, Local Works including Road Culverts, Public Health, Sanitation and Drainage, etc. The Scheme also provides for Grants-in-aid for Schools, Hospitals and other Local Institutions and loans in respect of Minor Irrigation Schemes in addition to Short-term Credit facilities.

(*c*) Please see the Statement on page 1329.

(*d*) (i) The Deputy Commissioners of Districts, in which the Blocks are located, are appointed the Deputy Development Commissioners for the National Extension Service Scheme. The Sub-Division Officers having jurisdiction over Taluks in which the Blocks are located, are appointed the *Ex-Officio* Project Executive Officers, except in the case of the Malavalli Block for which a whole-time Project Executive Officer is appointed. The programmes of work are executed by the Project Executive Officers assisted by a Block Development Officer at the Block Level and a team of workers trained in extension methods.

(ii) There is an Advisory Committee for each Block consisting of Official and Non-official Members. *Vide* copy of Government Order No. L.S. 9467-9537—Plng. 131-54-2, dated 25th February 1955 placed on the Table.

[*Vide* REPLY TO CLAUSE (*c*)]

Statement showing the expenditure on National Extension Service Blocks as on 15th January 1955.

Sl. No.	Name of the Block	Local Works	Social Education	Grants-in-Aid	Loans for Minor Irrigation Works	Loans for providing Short-Term Credit facilities
1	2	3	4	5	6	7
		Rs. a. p.	Rs. a. p.	Rs. a. p.	Rs. a. p.	Rs. a. p.
1	Ramanagaram *cum* Kanakapura ...	17,121 7 0	3,840 5 0	71 1 6	15,000 0 0	...
2	Gundlupet ...	38,632 0 6	8,420 0 0	1,521 0 0	...	...
3	Hole-Narsipur ...	21,382 3 0	2,748 1 9	3,217 12 3	...	18,090 0 0
4	Koppa-N. R. Pura ...	14,331 12 0	2,918 11 6	6,484 11 0	1,300 0 0	...
5	Harihar-Davangere ...	53,529 4 6	4,262 11 6	268 12 0	3,000 0 0	...
6	Thuruvekere ...	44,243 13 0	2,499 6 6	...	3,500 0 0	...
7	Sidlaghatta ...	17,436 3 0	2,209 3 0	3,904 4 3	...	...
8	Malavalli ...	17,542 12 0	1,348 6 0	1,991 3 3	...	45,805 0 0
9	Srinivasapur ...	...	...	...	...	...
10	Siruguppa ...	25 0 0	108 6 6	...	...	...
11	Mudigere ...	1,000 0 0	380 0 0	...	...	...
12	Tumkur *cum* Gubbi ...	254 9 0	428 12 0	...	...	...
13	Holalkere ...	...	5 11 0	...	...	...
14	Arkalgud ...	3.663 3 0	854 9 0	272 15 0	...	...

ಶ್ರೀ ಎಸ್. ಕರಿಯಪ್ಪ.—ತಾವು ಈ ಪ್ರಶ್ನೋತ್ತರದ ಎರಡನೆಯ ಹೇಜಿನಲ್ಲಿ ತೋರಿಸಿರತಕ್ಕ ಮೊದಲನೆಯ ಬ್ಲಾಕನ್ನು ಯಾವಾಗ ಪ್ರಾರಂಭಮಾಡಿದ್ದು ?

*ಡಾ॥ ಆರ್. ನಾಗನಗೌಡ.—ಉತ್ತರದಲ್ಲಿ ಅದನ್ನು ಕೊಟ್ಟಿದ್ದೇವೆ.

ಶ್ರೀ ಎಸ್. ಕರಿಯಪ್ಪ.—ಈ ಬ್ಲಾಕನ್ನು ಪ್ರಾರಂಭ ಮಾಡಿ ಇಲ್ಲಗೆ ಎರಡು ವರ್ಷಗಳ ಮೇಲಾಯಿತಲ್ಲವೇ?

ಡಾ॥ ಆರ್. ನಾಗನಗೌಡ.—1955ನೆಯ ಅಕ್ಟೋಬರ್ ಎರಡಕ್ಕೆ ಆಗುತ್ತದೆ.

ಶ್ರೀ ಎಸ್. ಕರಿಯಪ್ಪ.—ಇಲ್ಲಗೆ ಎರಡು ವರ್ಷ ಗಳಾಯಿತಲ್ಲವೇ ಎಂದು ಕೇಳುತ್ತೇನೆ ?

ಡಾ॥ ಆರ್. ನಾಗನಗೌಡ.—ಹೌದು ನಾಳೆ ಅಕ್ಟೋಬರ್ ಎರಡಕ್ಕೆ ಆಗುತ್ತದೆ ಎಂದು ಹೇಳಿದೆ.

ಶ್ರೀ ಎಸ್. ಕರಿಯಪ್ಪ.—ಈ ಬ್ಲಾಕುಗಳಿಗೆ ಅಡ್ವೈಜರಿ ಸಮಿತಿಗಳನ್ನು ನೇಮಕಮಾಡಲು ಕಾರಣವೇನು ?

ಡಾ॥ ಆರ್. ನಾಗನಗೌಡ.—ಈ N. E. S. ಬ್ಲಾಕುಗಳ ಯೋಜನೆ ಇನ್ನೂ ಹೊಸದಾಗಿತ್ತು. ಇದರ ಅರೇಂಜ್‌ಮೆಂಟಿಲ್ಲಾ ಹೊಸದಾಗಿತ್ತು. ಇದಕ್ಕೆ ಅನುಕೂಲವಾದಂಥ ಒಂದು ಪ್ರೊಸೀಜರನ್ನು ಕಂಡು ಹಿಡಿಯಲು ಕೊಂಚ ಆಲಸ್ಯವಾಯಿತು.

ಶ್ರೀ ಎಸ್. ಕರಿಯಪ್ಪ.—ಈ ಅಡ್ವೈಜರಿ ಸಮಿತಿಗೆ ತಾವು ಸದಸ್ಯರನ್ನು ಸೇರಿಸುವಾಗ ಆಯಾ ಬ್ಲಾಕಿನಲ್ಲಿ ಇಲ್ಲದೆ ಇರತಕ್ಕಂಥವರನ್ನೂ ಕೂಡ ಸದಸ್ಯರನ್ನಾಗಿ ಸೇರಿಸಬಹುದೇ ?

ಡಾ॥ ಆರ್. ನಾಗನಗೌಡ.—ಆಯಾ ಬ್ಲಾಕಿನಲ್ಲಿರುವವರನ್ನೇ ತೆಗೆದುಕೊಳ್ಳಲಾಗಿದೆ.

ಶ್ರೀ ಎಸ್. ಕರಿಯಪ್ಪ.—ಹಾಗಿದ್ದರೆ ತಾವೀಗ ಈ ರಾಮನಗರಂ-ಕನಕನಪುರ ಬ್ಲಾಕಿಗೆ ಡನಾಯ್ಕನ ಲಂಗೇಗೌಡ ಮತ್ತು ಕರಿಯಪ್ಪ ಎಂಬಿಬ್ಬರನ್ನು, ಇವರು ಆ ಬ್ಲಾಕಿಗೆ ಸೇರದೆ ಇದ್ದರೂ, ಹೇಗೆ ಸದಸ್ಯರನ್ನಾಗಿ ಆರಿಸಿಕೊಂಡಿದ್ದೀರಿ ?

ಡಾ॥ ಆರ್. ನಾಗನಗೌಡ.—ಆ ವಿಚಾರ ತಮಗೇ ಚೆನ್ನಾಗಿ ಗೊತ್ತಿದೆ. ಅದಕ್ಕೆ ಅವರು ಬಹಳ ಅನುಕೂಲವಾಗಿದ್ದಾರೆ (useful) ಎಂದು ಅವರ ಹೆಸರನ್ನು ಇದರಲ್ಲಿ ಸೇರಿಸಲಾಗಿದೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಈಗ ಈ ಬ್ಲಾಕುಗಳನ್ನು ತಾವು ಯಾವ ಯಾವ ತಾಲ್ಲೂಕಿನಲ್ಲಿ ಏರ್ಪಾಡುಮಾಡಿದ್ದೀರಿ ?

ಅಧ್ಯಕ್ಷರು.—230ನೆಯ ಪ್ರಶ್ನೆಗೆ ಒದಗಿಸಿರತಕ್ಕ ಉತ್ತರದಲ್ಲಿ ಅದನ್ನೆಲ್ಲಾ ತಿಳಿಸಿದ್ದಾರೆ, ನೋಡಿ.

ಶ್ರೀ ಟಿ. ಜಿ. ತಿಮ್ಮೇಗೌಡ.—ತಾವು ಈಗ ಈ N.E.S. ಬ್ಲಾಕುಗಳನ್ನು ತೆರೆದಿದ್ದೀರಲ್ಲ ಅಲ್ಲ ಏನೇನು ಕಾರ್ಯಕ್ರಮಗಳನ್ನು ಕೈಕೊಂಡಿದ್ದೀರಿ ?

ಡಾ॥ ಆರ್. ನಾಗನಗೌಡ —ನಾವು ಈ ವಿಚಾರವಾಗಿ ಒಂದು ಪ್ರತ್ಯೇಕ ಪುಸ್ತಕವನ್ನೇ ಅಚ್ಚುಹಾಕಿಸಿ ಅದನ್ನು ಎಲ್ಲಾ ಸದಸ್ಯರಿಗೂ ಈಗಾಗಲೇ ಹಂಚಿಸಿದ್ದೇವೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ತಾವು ನವ ತಿಪಟೂರು ತಾಲ್ಲೂಕನ್ನು ಒಂದು ಹಿಂದುಳಿದ ತಾಲ್ಲೂಕು ಎಂದು ಭಾವಿಸಿದ್ದೀರಾ ?

ಡಾ॥ ಆರ್. ನಾಗನಗೌಡ.—ಅದನ್ನು ನಾವು ಹಿಂದುಳಿದ ತಾಲ್ಲೂಕು ಎಂದು ಏನೂ ಅಂದುಕೊಂಡಿಲ್ಲ. ಅಲ್ಲಿ ಲೋಕ ಪ್ರಸಿದ್ಧವಾದ ಕೊಬ್ಬರಿ ದೊರೆಯುತ್ತದೆ. ಅದನ್ನು ಹಿಂದುಳಿದ ಪ್ರದೇಶ ಎಂದು ಹೇಳುವುದಕ್ಕಾಗುವುದಿಲ್ಲ. ಬಳ್ಳಾರಿಯಲ್ಲಿ ನಾವು ಇದನ್ನು ಹಿಂದುಳಿದ ಪ್ರದೇಶ ಎಂದು ಅಂದುಕೊಂಡಿಲ್ಲ. ಆದಾಗ್ಯೂ ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಈ ಯೋಜನೆಯನ್ನು ಸಂಸ್ಥಾನಾದ್ಯಂತವೂ ಜಾರಿಗೆ ತರಬೇಕೆಂದು ಅಂದುಕೊಂಡಿದ್ದೇವೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ತಿಪಟೂರು ತಾಲ್ಲೂಕಿನಲ್ಲಿ N.E.S. ಬ್ಲಾಕನ್ನು ತೆರೆಯಲು ಬಡ್ಜೆಟ್ಟಿನಲ್ಲಿ ಹಣವನ್ನೇನಾದರೂ ಒದಗಿಸಿದ್ದೀರಾ ?

ಡಾ॥ ಆರ್. ನಾಗನಗೌಡ.—ಈಗಾಗಲೇ ತುಮಕೂರು ಜಿಲ್ಲೆಯಲ್ಲಿ ಮೂರು ಕಡೆ ಅಂದರೆ ತುಮಕೂರು, ಗುಬ್ಬಿ ಮತ್ತು ತುರುವೇಕೆರೆ ಈ ಮೂರು ಸ್ಥಳಗಳಲ್ಲಿ ಈ ಬ್ಲಾಕುಗಳನ್ನು ತೆರೆದಿದ್ದೇವೆ. ಇನ್ನು ಮುಂದಕ್ಕೆ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಈ ಬ್ಲಾಕುಗಳನ್ನು ನಾನಾಗಲೇ ತಿಳಿಸಿದಂತೆ ಸಂಸ್ಥಾನಾದ್ಯಂತವೂ ಜಾರಿಗೆ ತರಬೇಕೆಂದು ಅಂದುಕೊಂಡಿದ್ದೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಕೇಂದ್ರ ಸರ್ಕಾರ ಈ ಬ್ಲಾಕುಗಳನ್ನು ಎಲ್ಲಾ ಕಡೆಗಳಲ್ಲಿಯೂ ಒಂದು ಪ್ರತ್ಯೇಕ ಡಿಪಾರ್ಟ್‌ಮೆಂಟನ್ನಾಗಿ ಮಾಡಬೇಕೆಂದು ಹೇಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಸ್ವಲ್ಪ ನಮಗೆ. . .

Sri M. CHIKKALINGIAH.—To give more attention.

Dr. R. NAGAN GOWDA.—Emphasis was mostly on agriculture, animal husbandry and things like that. It was felt that the Director of Agriculture would be very suitable for this work.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅದು ಹಾಗೆ ಸೂಚಬಲ್ಲಾಗಿರಬಹುದು. ಆದರೆ ಸೆಪರೇಟ್ ಇಲಾಖೆಯನ್ನು ಮಾಡಿದರೆ ಇದರ ಕೆಲಸ ಕಾರ್ಯಗಳನ್ನು ಬೇಗ ನಡೆಸುವುದಕ್ಕೆ ಅವಕಾಶವಾಗುವುದಿಲ್ಲವೇ ?

ಡಾ॥ ಆರ್. ನಾಗನಗೌಡ.—ಈಗಾಗಲೇ ಅದರ ಕೆಲಸಕಾರ್ಯಗಳೆಲ್ಲಾ ಜಾಗ್ರತೆ ಆಗುತ್ತಿವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ತಾವು ಇಲ್ಲಿ ತೋರಿಸಿರತಕ್ಕ ಖರ್ಚಿನಲ್ಲಿ 15 ತಿಂಗಳವರೆಗೆ ಆಗಿರತಕ್ಕ ಖರ್ಚು ಎಂದು ಅಪೆಂಡಿಕ್ಸಿನಲ್ಲಿ ತಿಳಿಸಿದ್ದೀರಿ. ಆದರೆ ಮಳವಳ್ಳಿಗೆ ಹೇಳಿರತಕ್ಕ ಖರ್ಚು ಕೇವಲ ಒಂಬತ್ತು ತಿಂಗಳವರೆಗೆ ಆಗಿರತಕ್ಕ ಖರ್ಚು ಮಾತ್ರ ಅಲ್ಲವೇ ?

ಡಾ॥ ಆರ್. ನಾಗನಗೌಡ.—ಆ ಬ್ಲಾಕ್ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೂ ಖರ್ಚಾಗಿರುವುದನ್ನು ಅಪೆಂಡಿಕ್ಸಿನಲ್ಲಿ ಕೊಟ್ಟಿದ್ದೇವೆ. ಈಚೆಗೆ ಹಣ ಇನ್ನೂ ಹೆಚ್ಚು ಖರ್ಚಾಗಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ತಾವು ಇಲ್ಲಿ ತೋರಿಸಿರತಕ್ಕ 15 ಬ್ಲಾಕುಗಳಿಗೂ 15 ತಿಂಗಳವರೆಗೆ ಆಗಿರತಕ್ಕ ಖರ್ಚು ಎಂದು ತೋರಿಸಿದ್ದೀರಿ. ಆದರೆ ಕೊನೆಯಲ್ಲಿ ತೋರಿಸಿರತಕ್ಕ ಏಳು ಬ್ಲಾಕುಗಳಿಗೆ ಖರ್ಚು ಬದ್ದಿರತಕ್ಕದ್ದೆಲ್ಲಾ ಕೇವಲ ಒಂಬತ್ತು ತಿಂಗಳಿಗೆ ಮಾತ್ರ ಅಲ್ಲವೇ ?

ಡಾ॥ ಆರ್. ನಾಗನಗೌಡ.—ಹೌದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆದುದರಿಂದ ಮುಂದಕ್ಕೆ ಈ ಮಳವಳ್ಳಿಯ ಡೆವಲಪ್‌ಮೆಂಟ್ ಬ್ಲಾಕಿಗೆ ಹೆಚ್ಚು ಹಣವನ್ನು ಒದಗಿಸುತ್ತೀರಾ ?

ಡಾ॥ ಆರ್. ನಾಗನಗೌಡ.—ಆ ಮಳವಳ್ಳಿಯ ಡೆವಲಪ್‌ಮೆಂಟ್ ಬ್ಲಾಕಿಗೆ ಈಗಲೂ ಹೆಚ್ಚು ಗಮನ ಕೊಟ್ಟಿದ್ದೇವೆ. ಯಾವ ಪ್ರದೇಶದಲ್ಲಿ ಜನರು ಈ ಯೋಜನೆಯ ಬಗ್ಗೆ ಹೆಚ್ಚು ಉತ್ಸಾಹ ಮತ್ತು ಶ್ರದ್ಧೆಗಳನ್ನು ತೋರಿಸಿ, ತಮ್ಮ ಸಹಕಾರ ನೀಡಲು

ಮುಂದೆ ಬರುತ್ತಾರೋ ಅಂಥವರಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂದು ಅಂದುಕೊಂಡಿದ್ದೇವೆ.

Sri H. C. LINGA REDDY.—Out of Rs. 7·5 lakhs given for each Block, what is the amount spent on the staff ?

Dr. R. NAGAN GOWDA.—The amount spent on the staff is about Rs. 25,000 in the case of all blocks which have been working from October 1953 and the amount that is spent on the personnel is limited by the orders in the scheme itself.

Sri H. C. LINGA REDDY.—What is the amount I am asking ?

Dr. R. NAGAN GOWDA.—As you will see, the amount, about a lakh of rupees, is set apart for the expenditure and that is the original order. Out of Rs. 7·5 lakhs, one lakh is for the personnel expenditure for the three years.

Sri H. C. LINGA REDDY.—In Sidlaghatta Taluk you introduced N.E.S. Block about two years ago. What is the amount spent out of Rs. 7·5 lakhs so far ?

Dr. R. NAGAN GOWDA.—Sidlaghatta Taluk has spent Rs. 76,000. The figures as printed here are up to the 15th of January. I have got figures up to the 26th of February. It shows that they have spent Rs. 76,000.

Sri H. C. LINGA REDDY.—By seeing the statement of expenditure, are the Government satisfied that the amount has been spent expeditiously and properly ?

Dr. R. NAGAN GOWDA.—You will notice under two columns 'minor irrigation loans' and 'short term loans' not much money has been expended. That means, many loans have not been taken. That was because it was only last year we worked out the procedure by which they could take short term loans for crop production. That itself is of the order of Rs. 3 lakhs. Now you will have a Central Bank and the procedure has all been worked out. I think they will be able to use Rs. 3 lakhs easily for giving short term loans. So it means considerable amount of expenditure. Then there is the amount for minor irrigation works. They have taken only Rs. 7,850 and now that the people are anxious to have wells and all that, they could take loans from this amount of Rs. one lakh. It is expected that they will come forward to take these loans.

Sri H. C. LINGA REDDY.—Is it true that the Government of India have recently converted many of the N.E.S. blocks into community projects ?

Dr. R. NAGAN GOWDA.—No. But they are proposing to convert them into development blocks. The proposal is there. But they have not yet done so.

ಶ್ರೀ ಯು. ಎಂ. ಮಾದಪ್ಪ.—ಹೊಸದಾಗಿ ನ್ಯಾಷನಲ್ ಎಕ್ಸ್‌ಟೆಷ್ಷನ್ ಸ್ಕೀಮ್ ಜಾರಿಗೆ ಕೊಡುವಾಗ, ಪಕ್ಕದ ಯಾವುದಾದರೂ ತಾಲ್ಲೂಕಿನಲ್ಲಿ ಇದ್ದರೆ, ಪಕ್ಕದ ತಾಲ್ಲೂಕಿಗೆ ಕೊಡುವ ಪದ್ಧತಿ ಜಾರಿಯಲ್ಲಿದೆಯೆ ?

Dr R. NAGAN GOWDA.—That may not be the only point we have to consider. ಈ ವಿಚಾರವನ್ನೂ ಪರಿಶೀಲಿಸುತ್ತಾರೆ.

ಶ್ರೀ ಯು. ಎಂ. ಮಾದಪ್ಪ.—ಹೀಗೆ ಮಾಡುವುದರಿಂದ ಸಿಬ್ಬಂದಿ ಖರ್ಚು ಕಡಿಮೆ ಮಾಡುವುದಕ್ಕವಕಾಶವಿದೆ ಎಂಬ ಅಂಶವನ್ನು ಯೋಚನೆ ಮಾಡಿದ್ದೀರಾ ?

ಡಾ॥ ಆರ್. ನಾಗನ ಗೌಡ.—ಇಲ್ಲ, ಅದಕ್ಕೆ ಬೇರೆ ಬೇರೆ ಸಿಬ್ಬಂದಿ ಇರಬೇಕಾಗುತ್ತದೆ. ಒಂದಕ್ಕೆ ಎಷ್ಟು ಸಿಬ್ಬಂದಿ ಬೇಕೋ ಅಷ್ಟು ಬೇಕಾಗುತ್ತದೆ, ಕಡಿಮೆ ಯಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಎರಡು ತಾಲ್ಲೂಕುಗಳಲ್ಲಿ ಒಂದೇಸಾರಿ ಜಾರಿಗೆ ಕೊಡುವಾಗ ಒಬ್ಬರೇ ನ್ಯಾಷನಲ್ ಎಕ್ಸ್‌ಟೆಷ್ಷನ್ ಬ್ಲಾಕ್ ಆಫೀಸರನ್ನು ನೇಮಕ ಮಾಡಿದರೆ ಖರ್ಚು ಕಡಿಮೆಯಾಗುವುದಿಲ್ಲವೆ ?

ಡಾ॥ ಆರ್. ನಾಗನ ಗೌಡ.—ಹಾಗೆ ಒಬ್ಬರನ್ನೇ ಎರಡಕ್ಕೂ ನೇಮಕ ಮಾಡುವುದಕ್ಕಾಗುವುದಿಲ್ಲ. ವಿಸ್ತೀರ್ಣ ಹೆಚ್ಚಿದರೆ ಒಬ್ಬರಿಂದ ಕೆಲಸ ನಡೆಯುವುದಿಲ್ಲ, ಬೇರೆ ಬೇರೆ ಮಾಡಬೇಕು.

ಶ್ರೀ ಯು. ಎಂ. ಮಾದಪ್ಪ.—ಆಗಲೇ ಜಾರಿಯಲ್ಲಿರುವ ತಕ್ಕ ತಾಲ್ಲೂಕುಗಳಿಗೆ ಜೀಪ್ ಕಾರುಗಳನ್ನು ಕೊಟ್ಟಿರುವುದರಿಂದ ಒಬ್ಬರಿಂದಲೇ ಕೆಲಸ ನೋಡಿಕೊಳ್ಳಲು ಸಾಧ್ಯವಾಗುವುದಿಲ್ಲವೆ ?

Dr. R. NAGAN GOWDA.—I do not think we will agree to that kind of proposition.

ಶ್ರೀ ಎಚ್. ಕೆ. ಶಿವರುದ್ರಪ್ಪ.—'ಸಿ' ಭಾಗದ ಪ್ರಶ್ನೆಗೆ ಉತ್ತರವಾಗಿ 38,632 ರೂಪಾಯಿ ಗುಂಡ್ಲು ಪೇಟೆಗೆ ಖರ್ಚಾಗಿದೆ ಎಂದು ಹೇಳಲಾಗಿದೆ, ಇದು ನರಿಯೆ ?

Dr. R. NAGAN GOWDA.—For Gundlupet on 15th January 1954, the expenditure on local works was Rs. 38,632. But on 26th February, the expenditure on local works comes to Rs. 49,615 in Gundlupet.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ 14 ಬ್ಲಾಕ್ ಗಳಲ್ಲಿ ಸಂಸ್ಥಾನದಲ್ಲಿ ಚೆನ್ನಾಗಿ ಕೆಲಸ ಮಾಡುವ ಬ್ಲಾಕ್ ಯಾವುದು ?

ಡಾ॥ ಆರ್. ನಾಗನ ಗೌಡ.—ವರದಿಯನ್ನು ತಮ್ಮ ಮುಂದಿಟ್ಟಿದ್ದೇವೆ, ಮುದ್ರಣ ಮಾಡಿಸಿ ಹಂಚಿದ್ದೇವೆ. ಅದರಮೇಲೆ you can draw your own conclusions.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಇದರಲ್ಲಿ participate ಮಾಡುವುದರಲ್ಲಿ ಜನರ participation ಮುಖ್ಯವೋ ಅಥವಾ ಹಣದ participation ಮುಖ್ಯವೊ ?

Dr. R. NAGAN GOWDA.—People's participation, I think, will get the first priority.

ಶ್ರೀ ಎಚ್. ಕೆ. ಶಿವರುದ್ರಪ್ಪ.—People's participation ನಲ್ಲಿ ಗುಂಡ್ಲುಪೇಟೆ ಪ್ರಥಮ ಸ್ಥಾನ ಪಡೆದಿದೆ ಎಂಬುದನ್ನು ಒಪ್ಪಿಕೊಳ್ಳುತ್ತೀರಾ ?

Dr. R. NAGAN GOWDA.—That comparison has not been made as yet.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಕೇಂದ್ರ ಸರ್ಕಾರದವರು ಮೈನೂರು ಸಂಸ್ಥಾನಕ್ಕೆ ನಾಲ್ಕು ಬ್ಲಾಕ್ ಗಳನ್ನು ತೆಗೆದುಕೊಳ್ಳಬೇಕೆಂದು ಸೂಚನೆ ಕೊಟ್ಟಿದ್ದಾರೆಯೇ ?

(No Answer)

ಶ್ರೀ ಎ. ವಿ. ನರಸಿಂಹರೆಡ್ಡಿ.—220 ನೆಯ ಪ್ರಶ್ನೆಯ (*a*) ಭಾಗದಲ್ಲಿ 'the requirements of a taluk or other area for being eligible to be recommended to start a N.E.S. Centre' ಎಂದು ಕೇಳಿರುವುದಕ್ಕೆ 'the guiding principle in selecting the areas for locating the allotted N.E.S. Blocks is to make available the benefits of the scheme to rural population all over the state by stages, covering the entire State by the end of the Second Five-Year Plan period' ಎಂದು ಉತ್ತರ ಕೊಟ್ಟಿದೆ; ಇದು ಸರಿಯಾದ ಉತ್ತರವೆ ?

Dr. R. NAGAN GOWDA.—After all, we have got to make selection one year after another while our aim is . . . .

Mr. SPEAKER.—The question is whether the answer furnished is a proper answer to question (*a*).

Dr. R. NAGAN GOWDA.—That is a matter of opinion. I leave it to him.

ಶ್ರೀ ಎ. ವಿ. ನರಸಿಂಹರೆಡ್ಡಿ.—ಕಮ್ಯೂನಿಟಿ ಪ್ರಾಜೆಕ್ಟು ಅಥವಾ ನ್ಯಾಷನಲ್ ಎಕ್ಸ್‌ಟೆಷ್ಷನ್ ಬ್ಲಾಕ್‌ಗಳನ್ನು ಏರ್ಪಾಡು ಮಾಡಬೇಕಾದರೆ, ಕೆಲವು ಮೂಲಭೂತ ವಿಷಯಗಳು ಆ ಪ್ರದೇಶದಲ್ಲಿ ಇರಬೇಕೆಂದು ಪಂಚವಾರ್ಷಿಕ ಯೋಜನೆಯಲ್ಲಿ ಸೂಚನೆ ಮಾಡಿಲ್ಲವೆ ?

Dr. R. NAGAN GOWDA.—Notice, Sir. I do not know what exactly he is thinking of.

ಶ್ರೀ ಎ. ವಿ. ನರಸಿಂಹರೆಡ್ಡಿ.—ಒಂದು ಸ್ಥಳದಲ್ಲಿ ನ್ಯಾಷನಲ್ ಎಕ್ಸ್‌ಟೆಷ್ಷನ್ ಬ್ಲಾಕನ್ನು ಪ್ರಾರಂಭ ಮಾಡಬೇಕಾದರೆ, ಆ ಸ್ಥಳದಲ್ಲಿ ಕೆಲವು ನಲಕರಣೆಗಳು ಸಿಕ್ಕುವಂತಿರಬೇಕು, ಹಾಗಿದ್ದರೆ ಮಾತ್ರ ಅದಕ್ಕೆ ಖರ್ಚು ಮಾಡುವ ಹಣ ಸಾರ್ಥಕವಾಗುತ್ತದೆಂಬ ಉದ್ದೇಶ ವಿಲ್ಲವೆ ?

Dr. R. NAGAN GOWDA.—Well, that also is kept in mind.

ಶ್ರೀ ಎ. ವಿ. ನರಸಿಂಹರೆಡ್ಡಿ.—ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಂಸ್ಥಾನಾದ್ಯಂತ ಇದನ್ನು ಜಾರಿಗೆ ಕೊಡುವುದು ಗುರಿ ಎಂದು ಹೇಳುತ್ತೀರಿ. ಈ ಹೊತ್ತು ಸಂಸ್ಥಾನದಲ್ಲಿ ಎಷ್ಟು N.E.S. ಬ್ಲಾಕ್‌ಗಳಿವೆ?

ಅಧ್ಯಕ್ಷರು.—ಅದಕ್ಕೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಕೇಂದ್ರ ಸರ್ಕಾರದ ವರು ಪೂರ್ತಿ ಕೊಡುವುದಕ್ಕಾಗುವುದಿಲ್ಲವೆಂದರೆ, ಅವರ ಸಹಾಯದಿಂದಲೇ ಅಲ್ಲವೆ ಇದನ್ನು ಮಾಡುತ್ತಿರುವುದು ?

ಅಧ್ಯಕ್ಷರು.—ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ರೀತಿಯಾದರೆ ಉಳಿದಿರುವ ಆರು ವರ್ಷಗಳಲ್ಲಿ ನ್ಯಾಷನಲ್ ಎಕ್ಸ್‌ಟೆಷ್ಷನ್ ಬ್ಲಾಕ್‌ಗಳನ್ನು ಉಳಿದ ಎಲ್ಲಾ ತಾಲ್ಲೂಕುಗಳಲ್ಲಿಯೂ ಪ್ರಾರಂಭ ಮಾಡುವುದಕ್ಕೆ ಸಾಧ್ಯವೆ ?

Dr. R. NAGAN GOWDA.—During the first five years one-third of the area is to be covered and in the next Five-Year Plan, we expect that it will be accelerated and a greater area will be covered hereafter.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಬ್ಲಾಕ್‌ಗಳಲ್ಲಿ ಕೆಲಸ ಕಾರ್ಯಗಳು ಚೆನ್ನಾಗಿ ನಡೆಯುತ್ತಿಲ್ಲ, ಹಣ ವ್ಯರ್ಥವಾಗಿ ಖರ್ಚಾಗುತ್ತಿದೆ ಎನ್ನುವ ದೂರು ಬಂದಿರುವುದು ಗೊತ್ತಿದೆಯೆ ?

Dr. R. NAGAN GOWDA.—No, Sir. On the other hand, we have got reports that people are evincing a lot of interest in these things and are getting much benefit out of these.

ಶ್ರೀ ಎ. ವಿ. ನರಸಿಂಹರೆಡ್ಡಿ.—ಕೇಂದ್ರ ಸರ್ಕಾರದವರೇನಾದರೂ ಮೇಲ್ವಿಚಾರಣೆ ಬೋರ್ಡನ್ನು ರಚನೆ ಮಾಡಿದ್ದಾರೆಯೆ ?

ಡಾ॥ ಆರ್. ನಾಗನ ಗೌಡ.—ಹೌದು, Community Projects Administration ಗೆ ಒಂದು ಬೋರ್ಡಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅವರ ವರದಿಗಳು (periodical reports) ಬರುತ್ತವೆಯೆ ?

ಡಾ॥ ಆರ್. ನಾಗನ ಗೌಡ.—ಬರುತ್ತವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅವರ ವರದಿಯ ಪ್ರತಿಯನ್ನು ನಭೆಯ ಮುಂದಿಡುತ್ತೀರಾ ?

Dr. R. NAGAN GOWDA.—I will hand over that to him.

Mr. SPEAKER.—That portion of the report in relation to the working of these N.E.S. Blocks . . . .

Dr. R. NAGAN GOWDA.—In the report we are publishing, we will publish that also.

ಶ್ರೀ ಜಿ. ಪುಟ್ಟಸ್ವಾಮಿ.—ನ್ಯಾಷನಲ್ ಎಕ್ಸ್‌ಟೆಷ್ಷನ್ ಸ್ಕೀಮುಗಳನ್ನೂ ಡೆವಲಪ್‌ಮೆಂಟ್ ಬ್ಲಾಕ್‌ಗಳಾಗಿ ಪರಿವರ್ತನೆ ಮಾಡುತ್ತೀರಾ ?

ಡಾ॥ ಆರ್. ನಾಗನ ಗೌಡ.—ಹಾಗೂ ಮಾಡ ಬೇಕೆಂದಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಯಾವ ಯಾವುದನ್ನು ಡೆವಲಪ್‌ಮೆಂಟ್ ಮಾಡುವುದಕ್ಕೆ ಯೋಚನೆ ಮಾಡಿದ್ದೀರಿ?

ಡಾ॥ ಆರ್. ನಾಗನಗೌಡ.—ಅದು ಇನ್ನೂ ತೀರ್ಮಾನವಾಗಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಡೆವಲಪ್‌ಮೆಂಟ್ ಬ್ಲಾಕ್ಸ್ ಆಗಿ ಪರಿವರ್ತನೆ ಮಾಡುವುದಕ್ಕೆ ಏನು ಕಾರಣವಿರಬೇಕು?

ಅಧ್ಯಕ್ಷರು.—ಅದನ್ನೂ ಹೇಳಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿ.—ಮೂಡಗೆರೆ ಬ್ಲಾಕ್‌ನಲ್ಲಿ ಚೆನ್ನಾಗಿ ಕೆಲಸ ಮಾಡಿದ್ದಾರೆಂಬುದು ಗೊತ್ತಿದೆಯೇ?

ಅಧ್ಯಕ್ಷರು.—ಅದನ್ನು ಹೇಳಿದ್ದಾರೆ.

ಶ್ರೀ ಬಿ. ಚಿಕ್ಕಣ್ಣ.—ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಸ್ಥಾಪನೆಮಾಡುವ ಜಾಗದಲ್ಲಿ ಕೆಲವು ಅನುಕೂಲಗಳಿರಬೇಕೆ?

ಡಾ॥ ಆರ್. ನಾಗನಗೌಡ.—ಅನುಕೂಲಗಳಿರಲಿ, ಇಲ್ಲದಿರಲಿ ಎಲ್ಲಾಕಡೆಯೂ ಮಾಡಬೇಕೆಂದು ಕೇಂದ್ರ ಸರ್ಕಾರದ ಉದ್ದೇಶ.

ಶ್ರೀ ಬಿ. ಚಿಕ್ಕಣ್ಣ.—ನಾವು ಕೇಳಿದಾಗ, ಕೆಲವು ಅನುಕೂಲಗಳಿರುವಕಡೆಗೆ ಮಾತ್ರ ಕೊಡುವುದು ಎಂದು ಹೇಳಲಿಲ್ಲವೇ?

(ಉತ್ತರವಿಲ್ಲ)

ಶ್ರೀ ಬಿ. ಚಿಕ್ಕಣ್ಣ.—ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು.—ಆಗಲೇ ಹೇಳಿದ್ದಾರೆ.

ಶ್ರೀ ಬಿ. ಚಿಕ್ಕಣ್ಣ.—ಕೇಂದ್ರ ಪ್ಲಾನಿಂಗ್ ಬೋರ್ಡಿನವರು ಹೇಳುವಂತೆ ಮಾಡುತ್ತೀರೋ ಅಥವಾ ನೀವೇ ಪ್ಲಾನ್ ಮಾಡಿ ಕೇಂದ್ರ ಸರ್ಕಾರದ ಒಪ್ಪಿಗೆ ತೆಗೆದು ಕೊಳ್ಳುತ್ತೀರೋ?

ಡಾ॥ ಆರ್. ನಾಗನಗೌಡ.—ಆ ಸ್ಥಳಗಳಲ್ಲಿ ಏನು ಅನುಕೂಲ ಅನಾನುಕೂಲಗಳಿರುತ್ತವೆಂಬುದನ್ನು ನೋಡಿಕೊಂಡು ಕೆಲಸ ಮಾಡಬೇಕು, ಇಲ್ಲಿ ಕುಳಿತುಕೊಂಡು ಹೇಳುವುದಕ್ಕಾಗುವುದಿಲ್ಲ. ಸಬ್ ಡಿವಿಜ್ ಆಫೀಸರು, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು ಇವರೆಲ್ಲರೂ ಇರುತ್ತಾರೆ. ಸಂದರ್ಭಗಳನ್ನು ನೋಡಿಕೊಂಡು, ನ್ಯೂನತೆಗಳಿದ್ದರೆ ಸರಿಮಾಡಲು ಪ್ರಯತ್ನಿಸುತ್ತಾರೆ.

ಶ್ರೀ ಬಿ. ಚಿಕ್ಕಣ್ಣ.—ಇಲ್ಲಿಂದ ಕಳುಹಿಸಿತಕ್ಕದ್ದನ್ನು ಕೇಂದ್ರದವರು ಅಂಗೀಕರಿಸುತ್ತಾರೆಯೇ?

ಡಾ॥ ಆರ್. ನಾಗನಗೌಡ.—ಅಂಗೀಕರಿಸದೇ ಇರುವುದನ್ನು ನಾವು ಕಳುಹಿಸಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ನ್ಯಾಷನಲ್ ಎಕ್ಸ್‌ಟೆಷ್ ಸರ್ವಿಸ್ ಸ್ಕೀಮನ್ನು work out ಮಾಡುವುದಕ್ಕೆ ಡೆಪ್ಯುಟಿ ಕಮೀಷನರನ್ನು ನೇಮಕ ಮಾಡಿದ್ದೀರಿ. ಡೆಪ್ಯುಟಿ ಕಮೀಷನರಿಗೆ ಈಗಾಗಲೇ ಕೆಲಸ ಬೇಕಾದಷ್ಟು ಜಾಸ್ತಿಯಾಗಿರುವುದಲ್ಲವೆ?

ಡಾ॥ ಆರ್. ನಾಗನಗೌಡ.—ಈ ನ್ಯಾಷನಲ್ ಎಕ್ಸ್‌ಟೆಷ್ ಸರ್ವಿಸ್‌ಗೆ ಮುಖ್ಯವಾಗಿ ಈಗ Sub-Division Officer ರವರು Executive Officer ಆಗಿದ್ದಾರೆ. ಆದರೂ ಡೆಪ್ಯುಟಿ ಕಮೀಷನರು overall chargeನಲ್ಲಿದ್ದಾರೆ.

ಶ್ರೀ ಡಿ. ಆರ್. ಕರಿಗೌಡ.—ಸಬ್ ಡಿವಿಜ್ ಆಫೀಸರ್‌ಗಳಿಗೆ 4-5 ತಾಲ್ಲೂಕುಗಳು ಸೇರಿವೆ. ರೆವಿನ್ಯೂ ಕೇಸುಗಳು, ಮ್ಯಾಜರಾಯಿ ಕೇಸುಗಳು, good behaviour ಕೇಸುಗಳು ಇವುಗಳನ್ನು ನೋಡಿ ಕೊಳ್ಳಲು ಬೇರೆ ತಾಲ್ಲೂಕುಗಳಿಗೆ ಹೋಗುವುದರಿಂದ ಕೆಲಸ ಕಾರ್ಯಗಳಿಗೆ ತೊಂದರೆ ಯಾಗುವುದಿಲ್ಲವೆ?

ಡಾ॥ ಆರ್. ನಾಗನಗೌಡ.—ಅವರದು supervising work ಮಾತ್ರ. ನಿಜವಾಗಿ ಕೆಲಸ ಮಾಡುವವರು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್. ಅವರ ಅಧೀನದಲ್ಲಿ ವ್ಯವಸಾಯ, ಸಹಕಾರ ಮುಂತಾದುವುಗಳಿಗೆ ಸಂಬಂಧಪಟ್ಟ ಪ್ರವೀಣರಿದ್ದಾರೆ. ಪ್ರತಿ 10 ಹಳ್ಳಿಗಳಿಗೂ ಒಬ್ಬ Village Level Worker ಇದ್ದಾನೆ. ಸಬ್ ಡಿವಿಷ್ ಆಫೀಸರ್ directions ಮಾತ್ರ ಕೊಡುತ್ತಾರೆ ಮತ್ತು ಕೆಲಸ ಸರಿಯಾಗಿ ನಡೆಯುತ್ತಿದೆಯೇ ಇಲ್ಲವೇ ಎಂಬುದನ್ನು ನೋಡಿಕೊಳ್ಳುತ್ತಾರೆ.

ಶ್ರೀ ಡಿ. ಆರ್. ಕರಿಗೌಡ.—ಈಗ ಎರಡು ವರ್ಷಕ್ಕೆ 14 ತಾಲ್ಲೂಕು ಮಾತ್ರ ತೆಗೆದುಕೊಂಡಿದ್ದೀರಿ. ಇದೇ ಪ್ರಮಾಣದಲ್ಲಿ ಹೋದರೆ ಎಲ್ಲಾ ತಾಲ್ಲೂಕುಗಳನ್ನು ತೆಗೆದುಕೊಳ್ಳಲು 25 ವರ್ಷ ಬೇಕಾಗುತ್ತದಲ್ಲವೆ?

Mr. SPEAKER.—That question has been answered.

ಶ್ರೀ ಬಿ. ಹುಚ್ಚೇಗೌಡ.—ಈ ಜನವರಿ ಆಖೈರಿಗೆ ತುರುವೇಕೆರೆ ಬ್ಲಾಕಿಗೆ ಸಿಬ್ಬಂದಿಗಾಗಿ ಎಷ್ಟು ಖರ್ಚಾಗಿದೆ?

ಡಾ॥ ಆರ್. ನಾಗನಗೌಡ.—ತುರುವೇಕೆರೆ ಬ್ಲಾಕಿಗೆ ಫೆಬ್ರವರಿ 26 ನೇ ತಾರೀಖು ವರೆಗೂ ಸಿಬ್ಬಂದಿಗೆ 25 ಸಾವಿರ ರೂಪಾಯಿಗೆ ಮೇಲ್ಪಟ್ಟು ಖರ್ಚಾಗಿದೆ.

ಶ್ರೀ ಬಿ. ಹುಚ್ಚೇಗೌಡ.—ಅಲ್ಲಿ ಬ್ಲಾಕಿಗೆ ಸಂಬಂಧಪಟ್ಟ ಸಮಿತಿಯು ಸೇರಿದೆಯೇ?

ಡಾ॥ ಆರ್. ನಾಗನಗೌಡ.—ನನಗೆ ತಿಳಿದಿರುವಂತೆ ಆಗಿರಲಾರದು.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಜನಗಳ ಸಹಕಾರ ಯಾವರೀತಿ ಪಡೆಯುತ್ತೀರಿ.

ಡಾ॥ ಆರ್. ನಾಗನಗೌಡ.—ಈಗ ಅಲ್ಲಿರುವ Village Level Workers ಗ್ರಾಮ ಪಂಚಾಯತಿ ಅಧ್ಯಕ್ಷರು, ಪಟೇಲರು ಮತ್ತು ಇತರ ಪ್ರಮುಖರೂ ಸೇರಿ ಗ್ರಾಮಗಳಲ್ಲಿ ಏನಾದರೂ culverts, ರಸ್ತೆಗಳು, ಭಾವಿಗಳು ಮುಂತಾದುವು ಆಗಬೇಕಾದವು ಇದ್ದರೆ, ನಾವು ಇಷ್ಟು ಹಣಕೊಡುತ್ತೇವೆ, ನೀವು ಇಷ್ಟುಕೊಡಿ ಎಂದು ಮಾತನಾಡಿ ಎಲ್ಲವನ್ನೂ ತಿಳಿಸುತ್ತಾರೆ. ಈಗ ತುರುವೇಕೆರೆ ಬ್ಲಾಕ್‌ನಲ್ಲಿ local works ಎಂದು ಹೇಳಿ 48 ಸಾವಿರಕ್ಕೆ ಮೇಲ್ಪಟ್ಟು ಕೆಲಸವಾಗಿದೆ. ಇದೆಲ್ಲಾ ನಮ್ಮ ಖರ್ಚು. ರೈತರ contribution ಇನ್ನೂ ಹೆಚ್ಚಾಗಿಯೇ ಇರುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಈ ಸಮಿತಿಗಳನ್ನು ಮಾಡುವ ಉದ್ದೇಶವೇನು? ಒಂದು ವರ್ಷಕ್ಕೊಮ್ಮೆಯಾದರೂ ಈ ಸಮಿತಿಯಿಂದ ಏನು ಸಹಾಯ ನಿರೀಕ್ಷಿಸುತ್ತಿದ್ದೀರಿ? ಇದು Executive Bodyಯೇ, Advisory Bodyಯೇ? ಈ ಸಮಿತಿಯಿಂದ ಮುಂದೆ ಆಗ ಬೇಕಾದುದೇನು?

Dr. R. NAGAN GOWDA.—It is an Advisory Body.

ಶ್ರೀ ಟಿ. ಹನುಮಯ್ಯ.—ರಾಷ್ಟ್ರೀಯ ವಿಸ್ತರಣಾ ಯೋಜನೆಯ ಬ್ಲಾಕುಗಳನ್ನು ತೆಗೆದುಕೊಳ್ಳುವಾಗ ಸಂಬಂಧಪಟ್ಟ ಅಧಿಕಾರಿಗಳನ್ನೇನಾದರೂ ಕೇಳಿ ಅವರ ಶಿಫಾರಸಿನಂತೆ ಕೇಂದ್ರ ಸರ್ಕಾರಕ್ಕೆ ಬರೆಯುತ್ತೀರಾ?

ಡಾ॥ ಆರ್. ನಾಗನ ಗೌಡ.—ಸಂಬಂಧಪಟ್ಟ ಡೆಪ್ಯುಟಿ ಕಮೀಷನರ್ ಅವರ ಅಭಿಪ್ರಾಯ ಮತ್ತು ಡೆವ

(ಡಾ॥ ಆರ್. ನಾಗನ ಗೌಡ.)

ಲಪ್‌ಮೆಂಟ್ ಕಮೀಷನರ್ ಅವರ ಅಭಿಪ್ರಾಯ ತೆಗೆದು ಕೊಂಡು ಈ ಬ್ಲಾಕ್ಸ್ ಏರ್ಪಾಡು ಮಾಡುತ್ತೇವೆ.

ಶ್ರೀ ಟಿ. ಹನುಮಯ್ಯ.—ವ್ಯವಸಾಯದ ಇಲಾಖೆಯನ್ನು ಏನಾದರೂ ಕೇಳುತ್ತೀರಾ ?

ಡಾ॥ ಆರ್. ನಾಗನ ಗೌಡ.—ವ್ಯವಸಾಯದ ಇಲಾಖಾ ಡೈರೆಕ್ಟರೂ, ಡೆವಲಪ್‌ಮೆಂಟ್ ಕಮೀಷನರೂ ಒಬ್ಬರೇ ಆಗಿದ್ದಾರೆ.

ಶ್ರೀ ಟಿ. ಹನುಮಯ್ಯ.—ಅವರು ಶಿಫಾರಸು ಮಾಡುವುದು ಒಂದು, ತಾವು ಕಳುಹಿಸುವುದು ಒಂದು, ಈ ರೀತಿ ಏನಾದರೂ ಇದೆಯೇ ?

ಡಾ॥ ಆರ್. ನಾಗನ ಗೌಡ.—ಎಲ್ಲಾ ಇಲಾಖೆಗಳ ಮುಖ್ಯಾಧಿಕಾರಿಗಳೂ ತಮ್ಮ ತಮ್ಮ ಶಿಫಾರಸುಗಳನ್ನು ಕಳುಹಿಸಿಕೊಡುತ್ತಾರೆ. ಸರ್ಕಾರ ಅದರ ಮೇಲ್ಕ್ರಿಯಾರಣೆ ಮಾಡುತ್ತಾರೆ ಮತ್ತು ಅದರ ಮೇಲೆ decision ತೆಗೆದುಕೊಳ್ಳುತ್ತಾರೆ.

ಶ್ರೀ ಟಿ. ಹನುಮಯ್ಯ.—ಅವರು ಕಳುಹಿಸಿರುವುದು ಒಂದು, ನೀವು ಕಳುಹಿಸಿರುವುದು ಒಂದು, ಹೀಗೆ ಅವರು ಶಿಫಾರಸು ಮಾಡಿರುವ ತಾಲ್ಲೂಕುಗಳೇ ಬೇರೆ, ನೀವು ಕಳುಹಿಸಿರುವ ತಾಲ್ಲೂಕುಗಳೇ ಬೇರೆಯಾಗಿರತಕ್ಕ ಸಂದರ್ಭಗಳಿವೆಯೇ ?

ಡಾ॥ ಆರ್. ನಾಗನ ಗೌಡ.—ಕೆಲವು ಸಂದರ್ಭಗಳಲ್ಲಿ ಹಾಗೂ ಆಗಿರಬಹುದು.

ಶ್ರೀ ಟಿ. ಹನುಮಯ್ಯ.—ಈ Central Planning Commission ನವರು ಈ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಬ್ಲಾಕುಗಳನ್ನು ಮಾಡಬೇಕಾದರೆ ಇಂಥಿಂಥ ಅವಶ್ಯಕತೆ ಇದ್ದರೆ ಮಾತ್ರ preference ಕೊಡಬೇಕು ಎಂದು ಏನಾದರೂ instructions ಕಳುಹಿಸಿದ್ದಾರೆಯೇ ?

ಡಾ॥ ಆರ್. ನಾಗನ ಗೌಡ.—ಅವರ instructions ಎಲ್ಲವನ್ನೂ ಗಮನದಲ್ಲಿಟ್ಟುಕೊಂಡೇ ಬ್ಲಾಕ್ ಸೆಲೆಕ್ಟ್ ಮಾಡಿದ್ದಾರೆ.

ಶ್ರೀ ಟಿ. ಹನುಮಯ್ಯ.—ಆ instructions ಗೆ ಏನಾದರೂ ವಿರುದ್ಧವಾಗಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿಡೆಯೇ ?

ಡಾ॥ ಆರ್. ನಾಗನ ಗೌಡ.—ಹಾಗೇನೂ ಇಲ್ಲ.

ಶ್ರೀ ಬಿ. ರಾಚಯ್ಯ.—ಈ ಬ್ಲಾಕುಗಳಲ್ಲಿ ಕೆಲಸ 1½ ವರ್ಷ ನಡೆದಮೇಲೆ ಅಲ್ಲಿ *per capita* income ಹೆಚ್ಚಾಗಿದೆಯೇ ?

ಡಾ॥ ಆರ್. ನಾಗನ ಗೌಡ.—ಅಂಥಾದ್ದೇನೂ ಸರ್ವೇಮಾಡಿಲ್ಲ, ಆದರೂಕೂಡ ಹಾಗೆ ಆಗತಕ್ಕದ್ದು ಅವಶ್ಯಕ. ಯಾಕೆಂದರೆ ಈಗ Ammonium Sulphate ಮುಂತಾದ್ದನ್ನೆಲ್ಲಾ ಅವರು ಹಾಕಿದ್ದರ ಮೇಲೆ ಪ್ರತಿಫಲ ಅಲ್ಲಿ ಬಂದೇ ಇರಬೇಕು. ತಮಗೆ ವಿವರಗಳು ಬೇಕಾಗಿದ್ದರೆ ಅದನ್ನೆಲ್ಲಾ classify ಮಾಡಿ ಇಟ್ಟಿದ್ದೇನೆ, ಕೊಡುತ್ತೇನೆ.

ಶ್ರೀ ಬಿ. ರಾಚಯ್ಯ.—ಆ ಪ್ರದೇಶದಲ್ಲಿ social condition ಏನಾದರೂ ಉತ್ತಮವಾಗಿದೆಯೇ ?

ಡಾ॥ ಆರ್. ನಾಗನ ಗೌಡ.—Economic conditions improve ಆಗುವುದರ ಜೊತೆಗೆ social condition ಸಹ improve ಆಗುತ್ತದೆ.

ಶ್ರೀ ಬಿ. ರಾಚಯ್ಯ.—Social condition ಎಷ್ಟರ ಮಟ್ಟಿಗೆ ಉತ್ತಮವಾಗಿದೆ ಎಂಬ ವಿಚಾರದಲ್ಲಿ ಒಂದು ಸರ್ವೆ ನಡೆಸುತ್ತೀರಾ ?

Dr. R. NAGAN GOWDA.—I will keep that in mind.

ಶ್ರೀ ಎಸ್. ಪರಮೇಶ್ವರಪ್ಪ.—ಸಿರುಗುಪ್ಪ ತಾಲ್ಲೂಕು ಈ National Extension Service Schemeಗೆ ಸೇರಿ 6 ತಿಂಗಳಾಯಿತು. ಇದುವರೆಗೆ ಅಲ್ಲಿ ಏನೇನು ಕೆಲಸ ನಡೆದಿದೆ ಎಂಬುದನ್ನು ತಾವು ಹೇಳಬಲ್ಲಿರಾ ?

ಡಾ॥ ಆರ್. ನಾಗನ ಗೌಡ.—ಸಿರುಗುಪ್ಪ ತಾಲ್ಲೂಕಿನಲ್ಲಿ ಈ 6 ತಿಂಗಳಲ್ಲಿ ಬಹಳ ಹೆಚ್ಚಿನ ಕೆಲಸ ನಡೆದಿದೆ. ಈ ಅವಧಿಯಲ್ಲಿ ಅವರು 73 ಸಾವಿರ ರೂಪಾಯಿ ಖರ್ಚು ಮಾಡಿದ್ದಾರೆ. ಅಲ್ಲಿ Central Bank ಅವಶ್ಯಕತೆ ಇದೆ. ಈಗಾಗಲೇ ರೈತರಿಗೆ 64 ಸಾವಿರ ರೂಪಾಯಿವರೆಗೆ ಸಾಲ ಕೊಟ್ಟಿದ್ದಾರೆ.

ಶ್ರೀ ಪಿ. ಎಸ್. ಬೊಮ್ಮೇಗೌಡ.—ವಿಶ್ವೇಶ್ವರಯ್ಯ ನಾರಾ ಪ್ರದೇಶದಲ್ಲರತಕ್ಕಂಥ training centre ನ್ನು community centre ಆಗಿ ಪರಿವರ್ತಿಸಬೇಕೆಂದು ಸ್ಥಳೀಯ ಬೋರ್ಡಿನವರೂ, ಡೆಪ್ಯುಟಿ ಕಮಿಷನರೂ ತಮಗೆ ಶಿಫಾರಸು ಮಾಡಿದ್ದಾರೆಯೇ ?

ಡಾ॥ ಆರ್. ನಾಗನ ಗೌಡ.—ಆ ವಿಷಯ ಇನ್ನೂ correspondence ನಲ್ಲಿದೆ. I am not able to say it exactly now.

ಶ್ರೀ ಜಿ. ಎಸ್. ಬೊಸ್ಮೇಗೌಡ.—ತಾವು ಶಿಫಾರಸು ಮಾಡಿದ್ದೀರಾ ಎಂದು ನಾನು ಕೇಳಿದ್ದು ?

Dr. R. NAGAN GOWDA.—I want notice for that.

Co-operative Societies.

Q.—188. **Sri V. M. MASCARENHAS** (St. John's Hill).—

Will the Government be pleased to state :—

(*a*) the number of Co-operative Societies in the State as on 1st January 1955 ;

(*b*) whether they consider that the Societies are working satisfactorily ;

(*c*) whether they are being audited annually ; if not, the number awaiting audit ;

(*d*) whether they are aware that departmental control and supervision over the societies is tending to get slack in recent years ?

A.—**Dr. R. NAGAN GOWDA** (Minister for Agriculture).—

(*a*) 5,679.

(*b*) Yes.

(*c*) Yes. So far, 3,010 Societies have been audited during the current year. 1,372 Co-operative Societies are awaiting audit. 1,297 Societies have not started working.

(*d*) No.

Sri V. M. MASCARENHAS.—In answer to (*d*) you have said 'no',